ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು

# ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ

**PILIKULA DVELOPMENT AUTHORITY, MANGALURU**

# PILIKULA REGIONAL SCIENCE CENTRE

**ವರದಿ**

## ಪಿಲಿಕುಳದಲ್ಲಿ ಇನ್ನೊವೇಶನ್ ಹಬ್ ಉದ್ಘಾಟನೆ

ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಸಮಪಾಲಿನ ಸಹಭಾಗಿತ್ವದೊಂದಿಗೆ ಸ್ಥಾಪಿಸಲಾದ 'ಇನ್ನೊವೇಶನ್ ಹಬ್' (ಅನ್ವೇಷಣಾ ಕೇಂದ್ರ)ವನ್ನು ಮಾರ್ಚ್ 07, 2024ರಂದು ಶ್ರೀ ಸಜೂ ಭಾಸ್ಕರನ್, ನಿರ್ದೇಶಕರು ವಿಶ್ವೇಶ್ವರಯ್ಯ ಇಂಡಸ್ಟ್ರಿಯಲ್ ಆ್ಯಂಡ್ ಟೆಕ್ನಾಲಾಜಿಕಲ್ ಮ್ಯೂಸಿಯಂ, ಬೆಂಗಳೂರು ಇವರು ಗಣ್ಯರ ಸಮ್ಮುಖದಲ್ಲಿ ಉದ್ಘಾಟಿಸಿದರು. ವಿಜ್ಞಾನ ಕೇಂದ್ರವು ಉತ್ತಮ ರೀತಿಯ ಲಿ ್ಲ ಕಾರ್ಯನಿರ್ವಹಿಸುತ್ತಿದ್ದು ಈಗ ನೂತನವಾಗಿ ಪ್ರಾರಂಭವಾಗಿರುವ ಅನ್ವೇಷಣಾ ಕೇಂದ್ರ ವಿದ್ಯಾರ್ಥಿಗಳಿಗೆ ಹಾಗೂ ಇನ್ನಿತರರಿಗೆ ವಿಜ್ಞಾನ ತಂತ್ರಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಅನ್ವೇಷಣೆ, ಕೃಷಿ, ಗೃಹ, ಕೈಗಾರಿಕೆಗಳಲ್ಲಿ ಅವುಗಳ ಉಪಯೋಗ, ಸುಧಾರಣೆ ಇತ್ಯಾದಿಗಳ ಬಗ್ಗೆ ಕುತೂಹಲ ಮೂಡಿಸಿ ಮುಂದಿನ ಸಂಶೋಧನೆಗೆ ಮೆಟ್ಟಿಲು ಆಗಲು ನೆರವಾಗಲು ಸಾಧ್ಯ. ಜಿಲ್ಲೆಯ ವಿದ್ಯಾ ಸಂಸ್ಥೆಗಳ ಸಹಕಾರದೊಂದಿಗೆ ಕೇಂದ್ರವು ಯಶಸ್ವಿಯ ಾಗಿ ಕಾರ್ಯಾಚರಿಸಲಿ ಎಂದು ಹಾರೈಸಿದರು. ಶ್ರೀ ಮುಕುಲ್ ಜೈನ್ ಐಎಎಸ್ ಪ್ರೊಬೆಶನರ್ ಹಾಗೂ ನೋಡಲ್ ಅಧಿಕಾರಿ, ಪಿಲಿಕುಳ ಇವರು ಈ ಕೇಂದ್ರದ ಸೌಲಭ್ಯಗಳನ್ನು ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಪೂರ್ಣವಾಗಿ ಬಳಸಿಕೊಳ್ಳಲು ಕರೆಯಿತ್ತರು. ಅಟಲ್ ಟಿಂಕರಿಂಗ್ ಲ್ಯಾಬ್ (ಎಟಿಎಲ್) ನೋಡಲ್ ಅಧಿಕಾರಿ ಡಯಟ್‌ನ ಶ್ರೀಮತಿ ವೇದಾವತಿ ವಿಜ್ಞಾನ ಕೇಂದ್ರವು ಎಟಿಎಲ್ ಶಾಲೆಗಳಿಗೆ ಹಲವು ವಿಧದಲ್ಲಿ ಸಹಕಾರ ನೀಡುತ್ತಿದೆ. ಹೊಸತಾಗಿ ಆರಂಭವಾಗಿರುವ ಕೇಂದ್ರವು ಹೆಚ್ಚಿನ ವಿದ್ಯಾರ್ಥಿಗಳಿಗೆ ಉಪಯೋಗವಾಗುವುದೆಂದರು.



*Innovation hub - Inauguration*

ಡಾ. ಕೆ. ವಿ. ರಾವ್, ನಿರ್ದೇಶಕರು, ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಇವರು ಪ್ರಾರಂಭದಲ್ಲಿ ಎಲ್ಲರನ್ನು ಸ್ವಾಗತಿಸಿ ಪ್ರಾಸ್ತಾವಿಕ ಮಾತನ್ನಾಡಿ ವಿಜ್ಞಾನ ಕೇಂದ್ರದ ದಶಮಾನೋತ್ಸವದ ಸಂದರ್ಭದಲ್ಲಿ ತನ್ನ ಮುಂದಿನ ಹಂತದ ಬೆಳವಣಿಗೆಯಾದ ಇಂತಹ ಪ್ರಯತ್ನ ಸಂಶೋಧನಾಸಕ್ತರಿಗೆ ಸೂಕ್ತ ಅನುಕೂಲತೆಗಳನ್ನು ಒದಗಿಸುವ ಸಾಧನವಾಗುವ ನಿಟ್ಟಿನಲ್ಲಿ ಈಗಾಗಲೇ ಇತರ ಸಂಸ್ಥೆಗಳೊಂದಿಗೆ ಚರ್ಚಿಸಲಾಗಿದೆ. ಎಲ್ಲರ ಸಹಕಾರದೊಂದಿಗೆ ಹಾಗೂ ಸಲಹಾ ಸಮಿತಿಯ ಮಾರ್ಗದರ್ಶನದಲ್ಲಿ ಕಾರ್ಯಾರಂಭ ಮಾಡಲಾಗುವುದೆಂದರು.

ಅಧ್ಯಕ್ಷತೆ ವಹಿಸಿದ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಶ್ರೀ ಪ್ರವೀಣ ಬಿ ನಾಯಕ್, ಎಲ್ಲರಲ್ಲಿ ವೈಜ್ಞಾನಿಕ ಮನೋಭಾವನೆ ಬೆಳೆಸುವಲ್ಲಿ ಪಿಲಿಕುಳವು ಶ್ರಮವಹಿಸುವುದು ಮತ್ತು ದೇಶವನ್ನು ತಂತ್ರಜ್ಞಾನ ಕ್ಷೇತ್ರದಲ್ಲಿ ಇನ್ನೂ ಎತ್ತರಕ್ಕೇರಲು ಬೇಕಾದ ಪ್ರಯತ್ನಗಳನ್ನು ಮಾಡುವುದೆಂದರು. ಡಾ. ಹೆಚ್ ಎಸ್ ಶೆಣೈ ವಂದನಾರ್ಪಣೆಗೈದರು. ಶ್ರೀ ಜಗನ್ನಾಥ್ ಕಾರ್ಯಕ್ರಮ ನಿರ್ವಹಿಸಿದರು.



***Inside Innovation Hub***

ಈ ಸಂದರ್ಭದಲ್ಲಿ ದ. ಕ. ಮತ್ತು ಉಡುಪಿ ಜಿಲ್ಲೆಗಳ ಎಟಿಎಲ್ ಶಾಲೆಗಳ ವಿದ್ಯಾರ್ಥಿಗಳಿಗೆ ವಿಜ್ಞಾನ ಮಾದರಿಗಳ ಸ್ಪರ್ಧೆ ಏರ್ಪಡಿಸಲಾಗಿತ್ತು. ಸಂತ ಜೋಸೆಫ್ ಇಂಜಿನಿಯರಿಂಗ್ ಕಾಲೇಜಿನ ಐಡಿಯಾ ಲ್ಯಾಬ್ ಮತ್ತು ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನ ವತಿಯಿಂದ ಆಕರ್ಷಕ ವಿಜ್ಞಾನ ವಸ್ತು ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಇವುಗಳನ್ನು ಮಣಿಪಾಲ್ ಸೆಂಟರ್ ಫಾರ್ ನ್ಯಾಚುರಲ್ ಸಾಯನ್ಸ್ ಇಲ್ಲಿನ ಪ್ರಾಧ್ಯಾಪಕರಾದ ಡಾ॥ ದೇಬಿಜೊಯ್ ಭಟ್ಟಾಚಾರ್ಯ ಉದ್ಘಾಟಿಸಿದರು.

ನಗರದ ಕಾಲೇಜು ವಿದ್ಯಾರ್ಥಿಗಳಿಗಾಗಿ, ಡಾ॥ ಭಟ್ಟಾಚಾರ್ಯ ಇವರಿಂದ ಬಾಹ್ಯಾಕಾಶ ತಂತ್ರಜ್ಞಾನ ಬಗ್ಗೆ ಉಪನ್ಯಾಸ ಮತ್ತು ಮಾಹೆ ವಿಶ್ವ ವಿದ್ಯಾಲಯದ ಡಾ. ಸೂರ್ಯ ಹರಿಕೃಷ್ಣನ್ ಇವರಿಂದ ವಿನೂತನ ವಿಜ್ಞಾನ ರಸಪ್ರಶ್ನೆಗಳ ಬಗ್ಗೆ ಪ್ರಾತ್ಯಕ್ಷಿಕೆ ನಡೆಯಿತು.

ಸಮಾರೋಪ ಸಮಾರಂಭದಲ್ಲಿ ವಿದ್ಯಾರ್ಥಿಗಳ ಅನಿಸಿಕೆಗಳ ಬಳಿಕ ವಿಜೇತರಿಗೆ ಬಹುಮಾನಗಳ ವಿತರಣೆ ನಡೆಯಿತು.

ದಶಮಾನೋತ್ಸವ ಸಂದರ್ಭದ ಈ ಹೊಸ ಯೋಜನೆ ಹಾಗೂ ಕಾರ್ಯಕ್ರಮಗಳು ಎಲ್ಲರ ಮೆಚ್ಚುಗೆಗೆ ಪಾತ್ರವಾದುವು.

.




***Inaugural function***



***Participants of the program***



***Science model by Students***



***Quiz competition to Students***